ಒಂದಾಣೆ ಮಾಲೆ 252

ಅಂಗದನ ರಾಯಭಾರ

[ಏಕಾಂಕ ನಾಟಕ]

❋

ರಚಯಿತರು::
ಶ್ರೀ ಈಶ್ವರಯ್ಯ, ಬಜಕೂಡ್ಲು.

❋

1959

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಅಂಗದನ ರಾಯಭಾರ

(ನಾಟಕ)

ಪಾತ್ರವರ್ಗ: 1. ಶ್ರೀರಾಮ. 2. ಸುಗ್ರೀವ. 3. ಹನುಮಂತ. 4. ಅಂಗದ. 5. ಲಕ್ಷ್ಮಣ. 6. ಕಪಿಗಳು. 7. ರಾವಣ. 8. ಪ್ರಹಸ್ತ. 9. ಸೇನಾಪತಿ. 10. ಶುಕ. 11. ಸಾರಣ. ಸಭಾಸದರು ಮೊದಲಾದವರು.

ದೃಶ್ಯ ೧

[ರಾವಣನ ಆಸ್ಥಾನ:—ಮಂತ್ರಿ, ಮಕ್ಕಳು, ಸಭಾಸದರು ಆಸೀನರಾಗಿರುವರು. ರಾವಣನ ಪ್ರವೇಶ, ಎಲ್ಲರೂ ಎದ್ದು ನಿಲ್ಲುವರು.]

ಸಭಾಸದರು: ಸಾರ್ವಭೌಮರಿಗೆ ಜಯವಾಗಲಿ! (ರಾವಣನು ಸಿಂಹಾಸನದಲ್ಲಿ ಮಂಡಿಸುವನು. ಎಲ್ಲರೂ ಕುಳಿತುಕೊಳ್ಳುವರು.)

ಚಾರಕ: (ಪ್ರವೇಶಿಸಿ) ಅರಿತಿಮಿರ ಮಾರ್ತಾಂಡ, ಲೋಕೋದ್ದಂಡ, ಸಂಗರವಿಜಯವಿಹಾರ, ಚತುರ್ವೇದ ಸದ್ವಿಚಾರ, ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕೋ ಭೋಪರಾಕು! ಕರುಣಗಳಿಂದ ಖಿಳಲೋಕಗಳನ್ನಾಳ್ವ ಉತ್ತುಂಗ ಬಲಾಢ್ಯ, ಶ್ರೀಮಂಗಳಕಾಂತಿಯಿಂದ ಕೂಡಿದ ನಮ್ಮ ಮಹಾಪ್ರಭುಗಳಾದ ರಾವಣೇಶ್ವರರಿಗೆ ಜಯವಾಗಲಿ!! ಮೂರು ಸಲ ವಂದಿಸಿ ಹೋಗುವನು.)

ರಾವಣ: ಅಮಾತ್ಯವರ್ಯರೇ, ನಮ್ಮ ರಾಜ್ಯವಾದ ಲಂಕಾನಗರಿಯಲ್ಲಿ ಏನಾದರೂ ವಿಶೇಷ ವಾರ್ತೆಗಳಿವೆಯೋ? ಪ್ರಜೆಗಳೆಲ್ಲರೂ ಕುಶಲದಿಂದ ಇರುವರಷ್ಟೇ? ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬಿವು ನಾಲ್ಕು ವರ್ಣಸ್ಥರು ತಮ್ಮ ತಮ್ಮ ಕುಲಪದ್ಧತಿಯನುಸಾರ ವರ್ತಿಸುವರಷ್ಟೇ? ನಮ್ಮ ಕಡೆಯ ಗುಪ್ತಚಾರರು ಹೊಸ ವಾರ್ತೆಯನ್ನು ತಂದಿರುವರೇ?

ಮಂತ್ರಿ: (ಪ್ರಹಸ್ತ ಎದ್ದು ಕೈಮುಗಿದು) ಮಹಾಪ್ರಭೋ ವಂದಿಸಿದ್ದೇನೆ. ಚತುರ್ವರ್ಣದವರು ಕ್ರಮಬದ್ಧವಾಗಿ ನಡೆಯುತ್ತಿರುವರು.

ಅದರೊಂದು ಹೊಸ ವಾರ್ತೆಯನ್ನು ಗೂಢಾಚಾರರು ತಂದಿರುವರು. ಶತ್ರುಗಳು ಯುದ್ಧಸನ್ನದ್ಧರಾಗಿ, ನಮ್ಮ ನಗರವನ್ನು ಮುತ್ತಿರುವರಂತೆ?

ರಾವಣ: ಯಾರವರು? ನರೇಶರೋ? ಗರುಡ, ಗಂಧರ್ವ, ಕಿನ್ನರರೋ? ದೇವರ್ಕಳೋ? ಯಕ್ಷ ರಾಕ್ಷಸ ಕಿಂ-ಪುರುಷರೋ? ಏತಕ್ಕಾಗಿ?

ಪ್ರಹಸ್ತ: ಪ್ರಭೋ, ಇಬ್ಬರು ಮಾನವರು ಅಸಂಖ್ಯಾತ ಕಪಿಗಳೊಡನೆ ಸೇರಿಕೊಂಡು, ತಮ್ಮ ಬಂಧನದಲ್ಲಿರುವ ಜನಕಸುತೆ ರಾಮನರಸಿ ಜಾನಕಿಯನ್ನು ಬಂಧವಿಮುಕ್ತಮಾಡಿ ಕರೆದುಕೊಂಡುಹೋಗಲು ಬಂದಿರುವರಂತೆ. ಅವರು ಬಲು ಬಲಾಢ್ಯರಂತೆ; ಅಸಮಶೂರರಂತೆ;............

ರಾವಣ: (ಕೋಪಾಕ್ರಾಂತನಾಗಿ) ಪ್ರಹಸ್ತಾ, ಸಾಕುಮಾಡು! ಏನಿದು ಹುಚ್ಚು! ಅಲ್ಪರಾದ ಮಾನುಷರು ಹುಲು ಕಪಿಗಳೊಡಗೂಡಿ ಬಂದರೆ, ಅವರನ್ನು ಬಲು ಬಲಾಢ್ಯರೆನ್ನಬೇಕೆ?

ಪ್ರಹಸ್ತ: ಅದನ್ನೇ ನಾನೂ ಹೇಳುವುದು. ಅವರಿಗೂ ನಿಮಗೂ ಅಜಗಜಾಂತರ ವ್ಯತ್ಯಾಸ ಆದರೆ, ಪ್ರಭೋ! ಇನ್ನು ಮುಂದಿನಾಲೋಚನೆಯೇನು?

ರಾವಣ: ಪಟ್ಟಣದ ರಕ್ಷಣೆಗೂ ಪ್ರತಿಭಟರ ಪ್ರವೇಶಕ್ಕೆ ತಡೆಯನ್ನು ಒಡ್ಡುವುದಕ್ಕೂ ಯೋಗ್ಯ ಸನ್ನಾಹವನ್ನು ಎಸಗುವಂತೆ ಸೈನಿಕರಿಗೆ ಅಜ್ಞಾಪಿಸಿರಿ. ಸೇನಾಪತಿಗಳೇ, ಏನೇನು ವ್ಯವಸ್ಥೆಗಳನ್ನು ಕೈಗೊಂಡಿರುವಿರಿ?

ಸೇನಾಪತಿ: ಮಹಾಪ್ರಭೋ, ದೇವಶಿಲ್ಪಿಯಾದ ವಿಶ್ವಕರ್ಮನೂ, ನಮ್ಮಗಳ ಚತುರ ಶಿಲ್ಪಿಯಾದ ಮಯನೂ, ಇವರಿಬ್ಬರೂ ಒಟ್ಟುಗೂಡಿ, ಊಹಿಸಲು ಅಸದಳವಾದ, ಭದ್ರತೆಯಿಂದ ಕೂಡಿದ ಕೋಟೆಕೊತ್ತಳಗಳನ್ನು ಕ್ಷಣಾರ್ಧದಲ್ಲಿ ನಿರ್ಮಿಸಿರುವರು. ಏಳು ಸುತ್ತಿನ ಕೋಟೆ, ಆಳವಾದ ಕಂದಕಗಳು, ಜಾರಿಬೀಳುವಂತೆ ನಯವಾದ ಝುರಿಗಳು. ಪ್ರತಿಯೊಂದು ಕೋಟೆಯ ಸುತ್ತಲೂ ಚತುರಂಗಬಲಗಳು.

ರಾವಣ: ತಂಡ ತಂಡವಾಗಿ ಮುತ್ತುವ ಕಪಿಗಳಿಗೇನನ್ನುಮಾಡಿರುವಿರಿ?

ಸೇನಾಪತಿ: ಸಾರ್ವಭೌಮ, ಕಾಡುಕಪಿಗಳನ್ನು ಅಗ್ನೇಯಾಸ್ತ್ರಗಳಿಂದ ಸುಟ್ಟು ಭಸ್ಮಮಾಡುವ ವ್ಯವಸ್ಥೆ ಪೂರ್ಣಗೊಂಡಿದೆ. ದಾರಿಗಳಲ್ಲಿ ತಡೆಯನ್ನು ಒಡ್ಡುವ ಸಿದ್ಧತೆಯೂ ಆಗಿದೆ.

ರಾವಣ: ಸೇನಾಪತಿಗಳೇ? ಸೇನಾಸನ್ನಾಹದ ವಿವರವನ್ನು ತಿಳಿದುದಾಯಿತು. ಇನ್ನು ಸಾಮಂತರಾಜರಾದ ಭಾರತ ಮೊದಲಾದ ನವಖಂಡ

ಗಳ ನರೇಶರು, ಗರುಡ, ಗಂಧರ್ವ, ಯಕ್ಷರಾಕ್ಷಸ, ಕಿನ್ನರ, ಕಿಂಪುರುಷರೇ ಮೊದಲಾದವರನ್ನು ಓಲೆ ಬರೆಯಿಸಿ, ನಮ್ಮ ಕಡೆಗೆ ಬರುವಂತೆ ಕರೆಯಿಸಿ ಕೊಳ್ಳುವ ಆವಶ್ಯಕತೆಯಿದೆಯೆ?

ಪ್ರಹಸ್ತ: ಪ್ರಭೋ, ಕರಣಿಕರಿಂದ ಈ ಮೊದಲೇ ಓಲೆಯನ್ನು ಬರೆಸಿ, ಓಲೆಕಾರರನ್ನು ಅಟ್ಟಿರುತ್ತೇನೆ.

ರಾವಣ: ಚಾಣಾಕ್ಷರಾದ ನಿಮ್ಮಂತಹವರು ಇರುವುದರಿಂದಲೇ ಲಂಕಾ ನಗರದ ಕೀರ್ತಿಯು ದಿಗ್ದೇಶಗಳಲ್ಲಿ ಹರಡಿದೆ. ಇರಲಿ. (ಸ್ವಗತ) ರಣ ಸಿದ್ಧತೆಯನ್ನು ಯೋಗ್ಯ ರೀತಿಯಲ್ಲಿ ನೆರವೇರಿಸಿದ್ದಾಯಿತು. ಇನ್ನು ವೈರಿ ಸೈನ್ಯದ ವಿಸ್ತಾರವನ್ನು ಕಣ್ಣಾರೆ ಕಂಡು, ಪರಾಂಬರಿಸುವುದಕ್ಕಾಗಿ, ಕೋಟೆಯ ಗೋಡೆಯನ್ನೇರಿ, ಆ ಸೈನ್ಯದ ವಿಚಾರಗಳನ್ನು ನಮ್ಮ ಕಡೆಯ ಗೂಢಚಾರರಾದ ಶುಕ-ಸಾರಣರಿಂದ ತಿಳಿಯಬೇಕು. (ಪ್ರಕಾಶ) ಯಾರಲ್ಲಿ? ಗುಪ್ತಚಾರರಾದ ಶುಕ-ಸಾರಣರನ್ನು ಬರಮಾಡಿ!

ಶುಕ-ಸಾರಣ: (ಪ್ರವೇಶಿಸಿ) ಪ್ರಭೋ! ಸಾಷ್ಟಾಂಗ ವಂದಿಸಿರುತ್ತೇವೆ? ನಮ್ಮಿಂದಾಗಬೇಕಾದ ಕಾರ್ಯವೇನು?

ರಾವಣ: ಚಾರಕರೇ, ನನಗೆ ಶತ್ರುಸೈನ್ಯದ ವಿಸ್ತಾರವನ್ನು ಕಣ್ಣಾರೆ ಕಾಣಬೇಕಾಗಿದೆ. ಮತ್ತವರ ಪರಿಚಯವನ್ನೂ ತಿಳಿಯಬೇಕಾಗಿದೆ.

ಶುಕ: ಒಡೆಯಾ? ನಮಗೆ ತಿಳಿದಷ್ಟು, ವಿಚಾರಗಳನ್ನು ತಿಳಿಸುತ್ತೇವೆ. ಹೊರಡೋಣವೇ?

ರಾವಣ: ಸರಿ. ಅಮಾತ್ಯರೇ, ಹಾಗೂ ಸಭಾಸದರೇ, ಇಂದಿನ ಸಭೆಯನ್ನು ಮುಗಿಸುವಾ. (ಎಲ್ಲರೂ ತೆರಳುವರು.) (ಪರದೆ ಬೀಳುವುದು.)

ದೃಶ್ಯ ೨

[ಲಂಕಾನಗರದ ಕೋಟೆಯ ಗೋಡೆ—ರಾವಣನು ಶುಕ ಸಾರಣರಿಂದ ಶತ್ರುಸೈನ್ಯದ ಪರಿಚಯವನ್ನು ತಿಳಿಯುತ್ತಿರುವನು. ಕಪಿಪಾಳ್ಯವು ಅಸ್ಪಷ್ಟವಾಗಿ ಕಾಣುವುದು.]

ರಾವಣ: ಶುಕ, ಅದೇ ಅಲ್ಲವೇ ಅರಿಸೇನೆ? ನೀವು ಹೊಗಳಿ ಅಟ್ಟಕ್ಕೇರಿಸುವ ಸೇನಾವಾರಿಧಿ ಅದೇ ಅಲ್ಲವೆ? ನಮ್ಮ ಸೆರೆಯಲ್ಲಿರುವ ಸೀತೆಯ ಪತಿ ಯಾರು? ಅವಳ ಮೈದುನನಾರು? ವಾಲಿಯನುಜನಾರು? ಶಕ್ರಸುತ ಸಂಭವನಾರು? ಬ್ರಹ್ಮನ ಜೊಚ್ಚಲ ಮಗನಾರು? ಅಗಾಧವಾದ ಶರಧಿಗೆ ಸೇತುವೆ ಕಟ್ಟಿದವನಾವನು?

ಶುಕ: ಪ್ರಭೋ, ಪರಾಂಬರಿಸೋಣಾಗಲಿ. ನಿಮ್ಮನುಜನಾದ ವಿಭೀಷಣನ ಹೆಗಲಮೇಲೆ ಕೈಯೂರಿ, ಅಂತರಂಗ ಮಾತಾಡುವವನು ಸುಬಾಹುವಿರೋಧಿಯಾದ ಸೀತಾಪತಿ ರಾಮ; ಅವನ ಸಮೀಪದಲ್ಲಿರುವಾತನೇ ನಿಮ್ಮ ಭಗಿನಿಯ ನಾಸಿಕಭೇದನ ಮಾಡಿದಾತ ಊರ್ಮಿಳಾಪತಿ ಲಕ್ಷ್ಮಣ; ಕಪಿಗಳಿಗೆ ಸೂಚನೆಕೊಡುತ್ತಿರುವವನು ಇನಸುತ ಸುಗ್ರೀವ; ಸೆಟೆದು, ಸೈನ್ಯದ ಮುಂಭಾಗದಲ್ಲಿರುವವನೇ ಸೇನಾನಾಯಕ ನೀಲ; ಸುಕ್ಕುಗಟ್ಟಿದ ಮುಖದ, ಬಾಗಿದ ಬೆನ್ನಿನವನೇ ವಿಧಿಸುತ ಜಾಂಬವ; ಭೂಮಿಯ ಸೃಷ್ಟಿಗಿಂತಲೂ ಮೊದಲೇ ಹುಟ್ಟಿದವನೆಂಬರು; ಜಗದಂಬೆಗೂ ಶಿವನಿಗೂ ಮದುವೆಯಾದಾಗ ಈತನಿಗೆ ಹತ್ತೊಂಭತ್ತು ವರುಷವಂತೆ, ಬಹು ಬಲಶಾಲಿಯಂತೆ, ಅದ್ವಿತೀಯ ವೀರನಂತೆ, ದೋರ್ದಂಡಪರಾಕ್ರಮಿ.

ರಾವಣ: (ಕೋಪಾಕ್ರಾಂತನಾಗಿ) ಶುಕ, ನಿಲ್ಲಿಸು! ನನ್ನ ಅಶನವನ್ನು ತಿಂದುಂಡ ನೀನು ನನ್ನೆದುರಿನಲ್ಲಿ ಶತ್ರುಸೇನೆಯನ್ನು ಹೊಗಳುವುದೇ? ಅತಿರೇಕದಿಂದಾಗಿ ನೀನು ಸಾಯುವಿ! ಸಾರಣ, ನೀನು ಹೇಳು.

ಸಾರಣ: (ವಿನೀತನಾಗಿ) ಸಾರ್ವಭೌಮ, ಸುಮಿತ್ರೆಯ ಸುತ ಲಕ್ಷ್ಮಣನ ಪಕ್ಕದಲ್ಲಿ ನಿಂತಿರುವಾತನೇ ವಾತಸಂಭವ ಹನುಮಂತ. ಬಾಲ್ಯದಲ್ಲೇ ಝಗಝಗಿಸುತ್ತಿರುವ ರವಿಯನ್ನು ಕಂಡು, ಹಣ್ಣೆಂದು ಭ್ರಮಿಸಿ, ಹಿಡಿಯಲು ನಭಕ್ಕೆ ಹಾರಿದಾತ; ಬಾಲಬ್ರಹ್ಮಚಾರಿಯಂತೆ; ಈತನ ಹೆಗಲಮೇಲೆ ಸಿಡಿಲಿನ ಜ್ವಾಲೆಯಂತೆ ಮೆರೆಯುವವನೇ ವಾಲಿಸುತ ಅಂಗದ; ಯುವರಾಜ; ಅಸಮಸಾಹಸಿ; ರಣಶೂರ. ಜೀಯಾ, ತನ್ನ ಹುಬ್ಬನ್ನು ಮೇಲೆ ಕೆಳಗೆ ಹಾರಿಸುತ್ತಾ ಬಿಂಕದಿಂದ ನಿಂತಿರುವಾತನೇ.................

ರಾವಣ: (ಸಿಟ್ಟಿನಿಂದ) ಸಾರಣ, ಸಾಕು, ಸಾಕು! ಅವಿವೇಕಿಯಂತೆ ಬೊಗಳಬೇಡ. ನಮ್ಮ ಬಲಪೌರುಷಾದಿಗಳನ್ನು ತಿಳಿದಿರುವವರು ನೀವಿರುವಾಗ, ಆ ಹುಲು ಕಪಿಗಳನ್ನು ಹೊಗಳುತ್ತ ಬದನೇಕಾಯನ್ನು ಪರಬ್ರಹ್ಮವೆನ್ನುವ ಹಾಗೆ ಗ್ರಹಿಸಿದಿರಲ್ಲವೇ? ಮರದಿಂದ ಮರಕ್ಕೆ ಹಾರುವ ಕಪಿಗಳಿಗೆ ಸರಿಸಮಾನರಿಲ್ಲವಂತೆ! ವೈರಿಗಳ ಕೈಗೆ ಸಿಕ್ಕಿ ಪ್ರಾಣಭಯದಿಂದ ಓಡಿ ಬಂದ ನಿಮಗಿದು ಸಹಜವೇ. ಅರ್ಕನನ್ನು ಮೋಡಗಳು ಕವಿದ ಮಾತ್ರಕ್ಕೆ, ಆತನು ಹೆದರಿ ತನ್ನ ಸಂಚಾರವನ್ನು ನಿಲ್ಲಿಸುವುದುಂಟೇ? ಅಂತೆಯೇ ಅಭೇದ್ಯವಾದ ಕೋಟೆಯನ್ನು ನುತ್ತಿ, ಪಾರಾಗಿ ಹೋಗುವೆವೆಂಬ ಆಸೆಯು

ಈ ಹುಲು ಕಪಿಗಳಿಗಿರುವುದೇ? ಸೀತೆಯನ್ನು ಬಿಡಿಸುವುದು ಕನ್ನಡಿಯೊಳಗಿನ ಗಂಟಿಗೆ ಆಶಿಸಟ್ಟಂತೆ ಎಂದು ತಿಳಿಯಲಿ.

ಸಾರಣ: ಪ್ರಭೂ, ದೇವತೆಗಳು ನಮ್ಮ ನಾಶಕ್ಕೆ ಈ ರೂಪದಲ್ಲಿ ಅವತರಿಸಿರುವರಂತೆ.

ರಾವಣ: ಸಾರಣ, 'ಅಂತೆ-ಕಂತೆ'ಗಳ ಕಟ್ಟನ್ನು ಬಚ್ಚಿಡತ್ತ! ಬೇರನ್ನು ಬಲ್ಲವರಿಗೆ ಎಲೆಯನ್ನು ತೋರಿಸುವುದುಂಟೆ? ಮೂಲೋಕ ಗಂಡನೆಂದು ಬಿರುದನ್ನು ಪಡೆದಿರುವ ಈ ರಾವಣನಲ್ಲಿ ಹೋರಾಡಿ, ಜೀವಹಿಡಿದು ಹೋಗುವೆವೆಂಬ ಆಶೆಯು ಅವರಿಗಿದ್ದರೆ, ಅಲ್ಪಕಾಲ ಸಂತೋಷಪಟ್ಟರಲಿ!

ಶುಕ: ಪ್ರಭೋ, ಸೇತುಬಂಧನವನ್ನು ನೋಡಿದರೇನೇ ಅವರ ಪರಾಕ್ರಮವನ್ನು ತಿಳಿಯಬಹುದು.

ರಾವಣ: (ಸಿಟ್ಟಿನಿಂದ) ಛೀ, ಎಂಥ ಮಾತಿದು!

ಸಾರಣ: (ಗಾಬರಿಯಿಂದ) ಪ್ರಭೋ, ತ್ವರೆಮಾಡಿರಿ; ತ್ವರೆ. ರಾಮನು ನಮ್ಮೆಡೆಗೆ ಬಾಣ ಪ್ರಯೋಗಿಸುತ್ತಿರುವನು. ಬೇಗನೇ ಮರೆಯಾಗುವದು. (ರಾಮನ ಅಸ್ತ್ರವು ಬಂದು ರಾವಣನ ಶ್ವೇತಛತ್ರವನ್ನು ಮುರಿಯುವುದು ಸುಗ್ರೀವನು ಹಾರಿ ರಾವಣನ ಕಿರೀಟಗಳನ್ನು ಕೊಂಡೊಯ್ಯುವನು. ರಾವಣನು ದುಃಖದಿಂದಲೂ ಆಶ್ಚರ್ಯದಿಂದಲೂ ನೋಡುವನು.)

ರಾವಣ: (ಸ್ವಗತ) ಏನಾಶ್ಚರ್ಯ? ವೈರಿಬಲದ ಸೇನೆಯನ್ನು ನೋಡುತ್ತಿರುವಾಗಲೇ ಶತ್ರುವಾದ ರಾಮನ ಒಂದೇ ಅಸ್ತ್ರದಿಂದ ನನ್ನ ಶ್ವೇತಛತ್ರವು ಮುರಿಯಿತು. ಕಪಿಯೊಂದು ಹಾರಿಬಂದು ನನ್ನ ಕಿರೀಟವನ್ನು ಕೊಂಡೊಯ್ದಿತು. ವೈರಿಯಾದರೂ ಆತನ ಸಾಹಸವನ್ನು ಕೊಂಡಾಡಬೇಕು. ಕಾರ್ಯಾರಂಭದಲ್ಲಿಯೆ ವಿಘ್ನಸೂಚನೆಗಳು (ದರ್ಪದಿಂದ) ಇರಲಿ. ಇದಕ್ಕೆಲ್ಲ ಹೆದರುವವನು ಈ ರಾವಣನಲ್ಲ. ಸದ್ಯ! ಅರಮನೆ ಪ್ರವೇಶಮಾಡಿ ಮುಂದಿನ ಕಾರ್ಯವನ್ನು ಯೋಚಿಸೋಣ. (ಪರದೆ.)

ದೃಶ್ಯ ೩

[ಶ್ರೀರಾಮನ ... ಬಗಳ ಸಮೂಹದಲ್ಲಿ ಶ್ರೀರಾಮನು ನಿಂತಿರುವನು. ಕಪಿಗಳು ರಣ... ...ಲ್ಲಿವೆ. "ರಘುಕುಲಸಾರ್ವಭೌಮನು, ರಕ್ಕಸರ ನಾಶಕ್ಕೆ ಅನುಜ್ಞೆಯನ ...ು" ಎನ್ನುತ್ತಿವೆ.]

ಶ್ರೀರಾಮ: ... ...ಕಿಷ್ಟು ಕೋಲಾಹಲ ಮಾಡುವಿರಿ? ಸ್ಥಿರಿ ಸಿರಿ. ಸಖಶ್ರೇಷ್ಠ ...

ಸುಗ್ರೀವ: ಸ್ವಾಮೀ, ಏನಪ್ಪಣೆ?

ಶ್ರೀರಾಮ: ಸುಗ್ರೀವಾ, ವೈರಿವಶದಲ್ಲಿರುವ ವಸ್ತುವನ್ನು ಮರಳಿ ಪಡೆಯಲು ಸಂಧಾನಮುಖದಿಂದ ಪ್ರಯತ್ನಿಸಿ, ಆತನು ನಿರಾಕರಿಸಿದ ಪಕ್ಷದಲ್ಲಿ, ದಂಡೋಪಾಯವನ್ನು ಕೈಕೊಳ್ಳುವುದು ರಾಜನೀತಿ. ಅದಕ್ಕಾಗಿ ದೂತನೋರ್ವನನ್ನು ರಾವಣನಲ್ಲಿಗೆ ಕಳುಹಿಸಬೇಕು, ನಿನ್ನಭಿಮತವೇನು?

ಸುಗ್ರೀವ: ಸ್ವಾಮೀ, ನಿಮ್ಮಭಿಪ್ರಾಯವೇ ನನ್ನಭಿಪ್ರಾಯ.

ರಾಮ: ಸುಗ್ರೀವ, ದೂತನನ್ನು ಕಳುಹಿಸು. ಹೋಗುವ ದೂತನು ಈ ಮಾತನ್ನು ರಾವಣನಿಗೆ ತಿಳಿಸಬೇಕು: "ನನ್ನ ಮಡದಿ ಜಾನಕಿಯನ್ನು ತಂದೊಪ್ಪಿಸಿ, ತಮ್ಮನಾದ ವಿಭೀಷಣನೊಡನೆ ಹೊಂದಿಕೆಯಿಂದ ಇರುತ್ತಾ ನ್ಯಾಯರೀತಿಯಲ್ಲಿ ರಾಜ್ಯಪರಿಪಾಲನೆಯನ್ನು ಮಾಡುವುದಾದರೆ, ನಮ್ಮ ಸೇನೆಯನ್ನು ಹಿಂತಿರುಗಿಸುತ್ತೇವೆ. ಅಲ್ಲದೆ, ಪರಸ್ತ್ರೀವ್ಯಾಮೋಹಿತನಾಗಿ, ಗರ್ವದಿಂದ ನಡೆದು, ದುರ್ಮಾರ್ಗಿಯಾಗಿ, ಪುತ್ರ-ಮಿತ್ರ-ಕಳತ್ರಾದಿಗಳ ನಾಶಕ್ಕೆ ಹೇತುವಾಗಿ, ಮೃತ್ಯುವಿನ ಬಾಯಿಗೆ ತುತ್ತಾಗಬೇಕೆಂದು ಬಯಸುವುದಾದರೆ ಆ ಹವಕ್ಕೆ ಸನ್ನದ್ಧನಾಗಿ ಬರಲಿ!" ವಿನಯ, ಸಚ್ಚರಿತ್ರ, ವಾಕ್ಪಟುತ್ವ, ಪ್ರಜ್ಞೆ, ಯುದ್ಧವಿದ್ಯಾನೈಪುಣ್ಯ— ಇವುಗಳಿಗೆ ತವರುಮನೆಯಾದಂತಹ ರಾಯಭಾರಿಯನ್ನು ಕಳುಹಬೇಕು. ಯಾರನ್ನು ಕಳುಹಲಿ?

ಸುಗ್ರೀವ: ಸ್ವಾಮೀ, ಇದಕ್ಕೇಕೆ ಚಿಂತೆ? ಸಕಲಸಂಪನ್ನನಾಗಿರುವ ಯುವರಾಜ ಅಂಗದನಿರುವನು. ಸುಕುಮಾರ ಅಂಗದಾ, ಇತ್ತ ಬಾ!

ಅಂಗದ: ಜೀಯಾ, ಕರೆದಿರಾ?

ಸುಗ್ರೀವ: ಅಂಗದಾ, ನೀನು ಸ್ವಾಮಿಯಾಜ್ಞೆಯಂತೆ ಲಂಕಾಪುರದ ಅರಸ ರಾವಣನ ಆಸ್ಥಾನಕ್ಕೆ ಹೋಗಬೇಕು. ಶ್ರೀರಾಮನ ಸಂದೇಶವನ್ನು ಆ ಪಾಪಿ ದಶಕಂಠನಿಗೆ ಹೇಳಬೇಕು. ಅವನ ಮನವನ್ನು ಸತ್ಕಾರ್ಯಕ್ಕೆ ಹಿಂತಿರುಗುವಂತೆ ಮಾಡಬೇಕು. ನೀನು ಮಾತ್ರ ದುಡುಕಬೇಡ. ರಾಯಭಾರತ್ವವೆಂದರೆ ಖಡ್ಗದ ಅಲುಗಿನಲ್ಲಿ ಜೇನುಹಾಕಿ, ಅದನ್ನು ನೆಕ್ಕಿದಂತೆ ಅತೀ ಕಷ್ಟ. ಇದನ್ನು ನೀನು ಬಲ್ಲೆ. ಜಾಗ್ರತೆಯಿಂದ ಹಿಂತಿರುಗು.

ಅಂಗದ: ಜೀಯಾ, ಆಜ್ಞೆಯನ್ನು ಶಿರಸಾವಹಿಸಿದ್ದೇನೆ.

ಸುಗ್ರೀವ: ಸುಕುಮಾರ, ಕಾರ್ಯದಲ್ಲಿ ಜಯಲಲನೆಯನ್ನು ಸ್ವೀಕರಿಸಿ ಬಾ. (ಅಂಗದನು ತೆರಳುವನು.)

ಶ್ರೀರಾಮ: ಅಂಗದ, ವಿಜಯಿಯಾಗಿ ಹಿಂದಿರುಗು.

ದೃಶ್ಯ ೪

[ರಸ್ತೆ—ಮಾತಾಡುತ್ತಾ ಮುಂದರಿಯುವನು.)

ಅಂಗದ: (ಸ್ವಗತ) ಅಯ್ಯಾ, ವೈರಿಸಮಿತಾನಕ್ಕೆ ಶ್ರೀರಾಮಚಂದ್ರನು ಸಾಕ್ಷಿಯಂತೆ ರಾಯಭಾರಿಯಾಗಿ ಹೋಗಬೇಕಾಯಿತು. ರಾಜಯೋಗ್ಯವಾದ ಮಣಿಕನಕಭೂಷಣಗಳಿಂದಲಂಕೃತನಾಗಿ ಹೋಟಾಯಿತು. ಮೂರ್ಖರಾದ ದಾಸವರು ಒಂದುವೇಳೆ ನನ್ನನ್ನು ಕೆಣಕಿದರೆ ಅವರೊಡನೆ ಕಾದಾಡದೆ ನಿರ್ವಾಹವಿಲ್ಲ. ದುಡುಕದಂತೆ ಚಿಕ್ಕಪ್ಪನವರು ಆಜ್ಞೆಮಾಡಿರುವರು. ಆತ್ಮರಕ್ಷಣೆಗಾಗಿಯಾದರೂ ನಾನು ಆಯುಧವನ್ನು ತೆಗೆದು ಕೊಳ್ಳಬೇಕು. ಯೋಜನಪ್ರಮಾಣದ ಗಿರಿಯನ್ನು ಹೆಗಲಿನ ಮೇಲಿಟ್ಟು, ಅರ್ಧಯೋಜನ ಅಗಲದ ವೃಕ್ಷವನ್ನು ಕಂಕುಳಲ್ಲಿ ಔಕಿಕೊಂಡು ಮುಂದರಿಯುತ್ತೇನೆ. ವೀರೋಚಿತವಾದ ರೀತಿಯಿಂದ ಮುಂದರಿದು ಲಂಕಾನಗರ ಪ್ರವೇಶಮಾಡಿಯಾಯಿತು ಲಂಕಾಪಟ್ಟಣದಲ್ಲಿ ನನ್ನ ಆಗಮನದಿಂದ ಕೋಲಾಹಲವೆದ್ದುಬಿಟ್ಟಿದೆ. ದುರ್ಗಪ್ರವೇಶ ಮಾಡಿದಾಕ್ಷಣ ಸ್ತ್ರೀಪುರುಷರು ಕಂಗೆಟ್ಟು ಓಡುತ್ತಿದ್ದಾರೆ. ವರ್ತಕರು ತಮ್ಮ ಅಂಗಡಿಯ ಬಾಗಿಲುಗಳನ್ನು ನನ್ನ ಭಯದಿಂದ ಮುಚ್ಚುತ್ತಿರುವರು. ಬೇಕಾದ ಆಹಾರಗಳನ್ನು ಅಲ್ಲಿಂದ ಸೂರೆಮಾಡಿ ಹೊಟ್ಟೆತುಂಬಿಸಿದೆ. ರಾವಣನ ಓಲಗಶಾಲೆಯು ಕಂಗೊಳಿಸುವುದು. ದ್ವಾರದಲ್ಲಿ ಕಾವಲಭಟರು ನನ್ನನ್ನು ತಡೆದಿದ್ದಾರೆ. ಇನ್ನು ಸಾವಕಾಶಮಾಡುವುದು ಉಚಿತವಲ್ಲ. ಕಾವಲಭಟರ ಶಿರಸ್ಸಂಹಾರಮಾಡಿ ಮುಂದೆ ನಿರಾತಂಕವಾಗಿ ಸಭೆಯನ್ನು ಪ್ರವೇಶಮಾಡುತ್ತೇನೆ. ಜಯಜಯ ರಘುಕುಲಸಾರ್ವಭೌಮ! (ಪರದೆ ಬೀಳುವುದು.)

ದೃಶ್ಯ ೫

[ರಾವಣನ ಆಸ್ಥಾನ— ರಾವಣನು ರನ್ನಗದ್ದುಗೆಯಲ್ಲಿ ಮಂಡಿಸಿರುವನು. ಮಂತ್ರಿ, ಮಕ್ಕಳು, ಅವನ ಇಕ್ಕೆಲದಲ್ಲಿ ಕುಳಿತಿರುವರು. ಸಾಮಂತರು, ಪ್ರಜೆಗಳು ಅವರವರ ಸ್ಥಾನಗಳಲ್ಲಿ ನಿಶ್ಶಬ್ದವಾಗಿ ಕುಳಿತಿರುವರು. ವೀರೋಚಿತವಾದ ರೀತಿಯಿಂದ ಅಂಗದನು ಪ್ರವೇಶಿಸುವನು.]

ಅಂಗದ: (ಸ್ವಗತ) ಓಹೋ, ಇದೇ, ಆ ರಾವಣನ ಆಸ್ಥಾನ. ಬಂದವರನ್ನು ವಿಚಾರಿಸುವ ಸಂಪ್ರದಾಯ ಮಾತ್ರ ಇಲ್ಲ ಆದರೆ, ಸ್ವಾಮಿಕಾರ್ಯದಂತೆ ನಡೆಯುವುದು ನನ್ನ ಕರ್ತವ್ಯ. (ಅತ್ತಿತ್ತ ನೋಡಿ)

ನೋಡಿದರೆ ಯಾವ ಆಸನವೂ ಬರಿದು ಇಲ್ಲ. ಇದ್ದರೂ ಕುಳಿತು ಕೊಳ್ಳಲು ಹೇಳುವವರಿಲ್ಲ. ಛೆ! ಛೆ!! ಇದಕ್ಕೆಲ್ಲಾ ಇಷ್ಟು ಆಲೋಚನೆ ಏತಕ್ಕೆ? ಇವರೆಲ್ಲರ ದರ್ಪವನ್ನು ಅಡಗಿಸುತ್ತೇನೆ. ನನ್ನ ಲಾಂಗೂಲವನ್ನೇ ಚಕ್ರಾಕಾರವಾಗಿ ಸುರುಟಿ, ಅದರ ಮೇಲೆ ಮಂಡಿಸುತ್ತೇನೆ. (ಬಾಲವನ್ನು ಸುರುಟಿ, ರಾವಣನ ಸಮ್ಮುಖದಲ್ಲಿ, ರಾವಣನ ಸಿಂಹಾಸನದಿಂದಲೂ ಎತ್ತರ ದಲ್ಲಿ, ಕಾಲ ಮೇಲೆ ಕಾಲು ಹಾಕಿ ಕುಳಿತುಕೊಳ್ಳುವನು. ಸುತ್ತಲೂ ಮೌನವು ಆವರಿಸುವುದು. ಪುನಃ ಸಭೆಯನ್ನು ನೋಡಿ) ಆಹಾ! ಈ ಖಳನ ಸಭಾವೈಖರಿಯನ್ನು ಏನೆಂದು ವರ್ಣಿಸಲಿ! ರಕ್ಕಸರ ಸಮೂಹವು ಅದಟಿ ನಿಂದ ಮೆರೆದಾಡುತ್ತಿದೆ. ಇವರನ್ನು ಮಾತನಾಡಿಸುತ್ತೇನೆ. (ಪ್ರಕಾಶ) ಎಲೈ ಸಭಾಸದರೆ, ಏಕೆ ಮೌನವಾಗಿರುವಿರಿ? ಭೂಸುತೆ ರಾಮನರಸಿ, ಸೀತಾಮಾತೆಯನ್ನು ತಂದ ರಾವಣನಾರೆಂದು ತೋರಿಸಿಕೊಟ್ಟರೆ ಉಪ ಕೃತನಾದೆನು. ಅವನಲ್ಲಿ ಸ್ವಲ್ಪ ಮಾತಾಡಬೇಕಾಗಿದೆ. ಅಯ್ಯಾ ಸಭಿಕರೇ, ಉತ್ತರಿಸವುದಿಲ್ಲವೇಕೆ?

ಪ್ರಹಸ್ತ: (ಸ್ವಗತ) ಈಗ ಬಂದಿರುವ ಕಪಿಯ ಮಾತಿನ ಧಾಟಿಯನ್ನು ಕೇಳುವಾಗ ಅಂದು ಲಂಕಾದಹನ ಕಾಲದ ಕಪಿಯಿಂದಲೂ ಮಿಗಿಲೆಂದು ತೋರುವುದು. ಬಹು ಸಾಹಸಿಯಂತೆ ಕಾಣುತ್ತಾನೆ! ಈ ಕಪಿಯನ್ನು ಮಾತನಾಡಿಸುವುದು ಮಂತ್ರಿಯಾದ ನನ್ನ ಕರ್ತವ್ಯ. (ಪ್ರಕಾಶ—ಏರು ಸ್ವರದಿಂದ) ಲೋ, ಕಪಿಯೇ, ಕಾಡಿಗೆಂದು ಹೊರಟವನು ದಾರಿತಪ್ಪಿ ಇಲ್ಲಿಗೆ ಬರಲಿಲ್ಲವಷ್ಟೇ!

ಅಂಗದ: ಲೋ ದಾನವ, ಇಷ್ಟು ಅದಟಿನಿಂದ ವ್ಯಯುಬ್ಬಿ ಕೇಳುತ್ತಿ ರುವ ನೀನಾರು? ಇರಲಿ. ನೀನಾದರೂ ನನ್ನ ಪ್ರಶ್ನೆಗೆ ಉತ್ತರಿಸಲು ಯತ್ನಿ ಸಿದಿಯಲ್ಲವೇ? ಅಷ್ಟೇ ಸಾಕು. ನಾನು ದಾರಿತಪ್ಪಿ ಇಲ್ಲಿಗೆ ಬರಲಿಲ್ಲವಯ್ಯಾ. ನನ್ನ ಸ್ವಾಮಿ, ರಘುಕುಲಸಾರ್ವಭೌಮ ಶ್ರೀ ರಾಮಚಂದ್ರನ ಕಡೆಯ ದೂತನಾದ ವಾಲಿಪುತ್ರ ಅಂಗದನೆಂದರೆ ನಾನು.

ಪ್ರಹಸ್ತ: ಲೋ! ಮರ್ಕಟ, ನಿನ್ನ ವಿಚಾರವಿರಲಿ. ನಿನ್ನಿಂದಲೂ ಶೌರ್ಯವಂತನಾದೊಬ್ಬ ಮಂಗನಿಗೆ ನಾವು ಏಳು ಕೆರೆಗಳ ನೀರನ್ನು ಕುಡಿಸಿ ದ್ದೇವೆ. ಅದು ನಿನಗೂ ತಿಳಿದಿರಬಹುದು. ಅದಂತಿರಲಿ. ದೂತನಾದ ವನು ತನ್ನ ಇಚ್ಛಾನುಸಾರ ರಾಜರ ಆಸ್ಥಾನದಲ್ಲಿ ವರ್ತಿಸುವುದೆಲ್ಲಿಯ

ಸಾಮ್ಯಯು? ಹಸ್ತದ್ವಯಗಳಲ್ಲಿ ವೃಕ್ಷ-ಪರ್ವತಗಳು, ರಾಜ ಸಮ್ಮುಖದಲ್ಲಿ ಉನ್ನತ ಸ್ಥಾನ. ಇದು ಉದ್ಧಟತನವಲ್ಲವೆ?

ಅಂಗದ: ಅದೆಲ್ಲ ಸರಿ. ಅತಿಥಿಯಾದವನಿಗೆ ಸತ್ಕರಿಸಬೇಕೋ, ಬೇಡವೋ?

ಪ್ರಹಸ್ತ: ನೀನು ಸರಿಯಾದ ಕ್ರಮದಲ್ಲಿ ಬರುತ್ತಿದ್ದರೆ ನಿನಗೆ ಮನ್ನಣೆ ಕೊಡಬೇಕಾದುದು ಸೂಕ್ತ. ಆದರೆ, ನೀನೆಸಗಿದುದು ತದ್ವಿರುದ್ಧ. ಸಭಾ ಪ್ರವೇಶಕ್ಕೆ ಮೊದಲು ನಮ್ಮ ಒಪ್ಪಿಗೆಯನ್ನು ನೀನು ಪಡೆಯಬೇಕಾಗಿರುವು ಪಲ್ಲವೆ? ಇದೊಂದೂ ಇಲ್ಲ. ಬರುತ್ತಿರುವಾಗಲೇ ದ್ವಾರಪಾಲಕರ ವಧೆ; ವಣಿಕರ ಬೀದಿ ಸೂರೆ; ಅಲ್ಲದೆ ಉದ್ಧಟತನ ಮೊದಲಾದುವುಗಳಿಗೆ ಅಗ್ರ ಸ್ಥಾನವನ್ನು ವಹಿಸಿಕೊಂಡಿರುತ್ತೀ. ಎಷ್ಟು ಬೇಕೋ ಅಷ್ಟು ಮಾತಾಡಿ ಹಿಂತಿರುಗಿ ಹೋಗು.

ಅಂಗದ: ಏಕೆ ಒಣಮಾತುಗಳನ್ನಾಡುವಿ? ಹೆದರಿ ಈ ರೀತಿ ಹೇಳು ವಿಯೋ? ನಾನೇನೂ ನಿಮ್ಮೊಡನೆ ಖಾಡಾಖಾಡಿ ಬವರಕ್ಕೆ ಬಂದವನಲ್ಲ. ಶ್ರೀ ರಾಮನಾಜ್ಞೆಯನ್ನು ರಾವಣನಿಗೆ ತಿಳಿಸುವುದಕ್ಕೆ ಬಂದಿರುತ್ತೇನೆ. ರಾವಣನನ್ನು ತೋರಿಸು. ನಿನ್ನಲ್ಲಿ ಅಧಿಕ ಪ್ರಸಂಗಕ್ಕೆ ಕೈಹಾಕಲು ಹೇಳಿದವರಾರು? ನೀನಾರು?

ಪ್ರಹಸ್ತ: ಎ ಕೋತಿ! ಆ ವಿಚಾರವೇ? ಅರಿತಿಮಿರ ಮಾರ್ತಾಂಡ ನಾದ ರಾವಣೇಶ್ವರ ಮಹಾಪ್ರಭುಗಳವರ ಮಂತ್ರಿಶೇಖರ ಪ್ರಹಸ್ತನೆಂದರೆ ನಾನೇ. (ಎದೆಗೆ ಕೈತಟ್ಟುವನು.)

ಅಂಗದ: ಅಮಾತ್ಯನೇ? ರಾವಣನಿಗೆ ಅಲ್ಲಸಲ್ಲದ ದುರ್ಬೋಧನೆ ಗಳನ್ನು ಹೇಳಿ, ಕೆಟ್ಟ ಮಾರ್ಗಕ್ಕೆ ಇಳಿವಂತೆ ಮಾಡುವವನು ನೀನೆಯೋ?

ಪ್ರಹಸ್ತ: ಎಲ, ನಿನಗಾರು ಈ ರಾಯಭಾರವನ್ನು ವಹಿಸಿಕೊಟ್ಟರು? ನನಗೆ ನಗು ಬರುತ್ತಿದೆ. ರಾಯಭಾರಿಯಲ್ಲಿರತಕ್ಕ ಯೋಗ್ಯತೆಯ ತಿಲಾಂಶ ವಾದರೂ ನಿನ್ನಲ್ಲಿರುವುದೇ? (ತಾತ್ಸಾರದಿಂದ) ಮರದಿಂದ ಮರಕ್ಕೆ ಹಾರುತ್ತ, ಚಿಟ್ಟರಿಗುಟ್ಟುತ್ತಾ, ಹಲ್ಲು ಕಿರಿದು ಓಡುವ ನಿಮ್ಮಂಥ ಹುಲು ಕಪಿಗಳಿಗೆ ರಾಜರಾಜರುಗಳಲ್ಲಿ ನಡೆಯುವ ಸಂಧಿಕಾರ್ಯಗಳ ಮರ್ಮವೇನು ತಿಳಿ ದೀತು? ಬಂದಂತೇ ಹಿಂದಿರುಗಿ ಜೀವವನ್ನು ಕಾಪಾಡಿಕೊ.

ಅಂಗದ: ಅಮಾತ್ಯವರ್ಯ, ಏತಕ್ಕೆ ಅರ್ಥವಿಲ್ಲದ ಮಾತುಗಳನ್ನಾ ಡುವಿ? ನಮ್ಮಿಂದ ಸೇತುಬಂಧನದ ಕಾರ್ಯವನ್ನು ಅವಲೋಕಿಸಿದ ಮೇಲೂ

ನಿನ್ನ ಈ ಮಾತುಗಳೇ? ರಾವಣನಿಗೆ ಬೇಡದ ಚಾಡಿಗಳನ್ನು ಹೇಳಿಕೊಟ್ಟು, ಆತನಬುದ್ಧಿಯನ್ನು ಕೆಡಿಸಿ, ಧರ್ಮಚ್ಯುತನಾಗಿ, ನೀತಿಬಾಹಿರನಾಗಿ, ಪರಲಲನೆಯನ್ನು ಬಲತ್ಕಾರದಿಂದ, ಕದ್ದು ತರುವಂತೆ, ಮೊದಲಾದ ಹೀನವಿಚಾರಗಳನ್ನು ಪದೇ ಪದೇ ಹೇಳಿ, ಅವನಿಗೆ ಮುಂದಟ್ಟಾಗುವಂತೆ ಬೋಧಿಸುತ್ತಿರುವ ನಿನಗೆ ಧಿಕ್ಕಾರವಿರಲಿ.

ಪ್ರಹಸ್ತ: ಎಲೇ ಕಪಿಯೇ, ಮತಿಭ್ರಾಂತನಾದವನಂತೆ ಏನಾದರೊಂದು ಬೊಗಳಬೇಡ. ನಿನ್ನ ಶರೀರದ ಸ್ವಾಧೀನತೆಯು ನಿನಗಿರಲಿ ರಾಜಸಭೆಯಲ್ಲಿ ಈ ತರದ ನುಡಿಗಳು ರಾಯಭಾರಿಗಳಲ್ಲಿರತಕ್ಕದ್ದಲ್ಲ. ಈಗ ನಿನ್ನನ್ನು ಇಲ್ಲಿ ಬಂಧಿಸಿ, ಚಿತ್ರಹಿಂಸೆಗೆ ಗುರಿಮಾಡಿದರೆ ಇಲ್ಲಿ ನಿನ್ನ ಪಕ್ಷವನ್ನು ವಹಿಸಿ, ಮಾತನಾಡುವವರು ಆರೂ ಇಲ್ಲ. ಕುಲಕಂಟಕನಾದ ವಿಭೀಷಣ, ನಮ್ಮ ಪ್ರಭುಗಳವರ ಅನುಜ; ಅವನೊಬ್ಬ ಇದ್ದ. ಆದರೆ, ನಿನ್ನಂತೆಯೇ ಬಾಯಿಗೆ ಬಂದಂತೆಯೇ ಬೊಗಳಿ; ಇಲ್ಲಿಯ ಸೇವಕರಿಂದ ದೂಡಿಸಿಕೊಂಡು ಎತ್ತಲೋ ಹೋದನು. ಜತನವಿರಲಿ.

ಅಂಗದ: ಪ್ರಹಸ್ತಾ, ಸುಮ್ಮನೆ ಸುಳ್ಳನ್ನು ಹೇಳಿ ವ್ಯರ್ಥವಾಗಿ ನರಕಕ್ಕೆ ಹೋಗಬೇಡ. ■ ವಿಭೀಷಣ ನಿಮ್ಮ ಹೇಯ ವರ್ತನೆಯನ್ನು ಕಂಡು ಹೇಸಿ, ಹೊರಟನೆಂದು ಹೇಳು. ಅರಣ್ಯವನ್ನು ಸಂಚರಿಸಿ, ಬೇಟೆಯಾಡುತ್ತ, ಸಾಸಿಕಪರಿಯಂತರ ಮದ್ಯ ಸೇವಿಸಿ, ಸ್ತ್ರೀಯರನ್ನು ಕಂಡಲ್ಲಿ ಶೀಲಗೆಡಿಸುವ ವೀರಾಧಿವೀರರು ನೀವಲ್ಲವೇನಯ್ಯಾ?

ಪ್ರಹಸ್ತ: ಅಂಗದಾ! ತನ್ನದನ್ನು ಬಚ್ಚಿಟ್ಟು ಪರರ ವರ್ತನೆಯನ್ನು ಟೀಕಿಸುವುದು ಬುದ್ಧಿವಂತರ ಲಕ್ಷಣವಲ್ಲ. ನಿನ್ನ ತಂದೆಯ ಹುಟ್ಟು, ನಿನ್ನ ಹುಟ್ಟು ಇದನ್ನೆಲ್ಲ ಮರೆಯಬೇಡ. ಅಣ್ಣನ ಹೆಂಡತಿಯನ್ನು ತಮ್ಮ, ತಮ್ಮನ ಹೆಂಡತಿಯನ್ನು ಅಣ್ಣ ಕಸಿದುಕೊಳ್ಳುವ ಕುಲ ನಿಮ್ಮದು. ನೀನು ಯಾರು? ನಿನ್ನ ಹೆತ್ತವರು ಯಾರು? ಸಾಕಿಸಲಹಿದವರಾರು? ದೇಶವಾವುದು?

ಅಂಗದ: ಪ್ರಹಸ್ತಾ, ನಿನ್ನೊಡೆಯನಾದ ರಾವಣನನ್ನು, ಹತ್ತು ತಲೆಯ ವಿಚಿತ್ರ ಆಟದ ಪ್ರಾಣಿಯೆಂದು ಕಪಿಕುಲಸಾರ್ವಭೌಮನಾದ ಶಕ್ರಸುತನು ತನ್ನ ಮಗು ಅಂಗದನ ತೊಟ್ಟಿಲಿಗೆ, ಆಟಕ್ಕಾಗಿ ಕಟ್ಟಿದ್ದನು. ಪರಾಕ್ರಮಶಾಲಿಯಾದ ವಾಲಿಯ ಮಗನೇ ನಾನು; ಹೆತ್ತಾಕೆಯು ತಾರಾದೇವಿ; ನನ್ನ ರಕ್ಷಕರು ಇನಸುತ ಸುಗ್ರೀವರು; ನನ್ನ ದೇಶ ಕಿಷ್ಕಿಂದೆ. ನಮ್ಮ ಸ್ವಾಮಿಯಾದ ರಘುವರನ ಕೆಲಸಕ್ಕಾಗಿ ಬಂದಿರುತ್ತೇನೆ.

ಪ್ರಹಸ್ತ: (ನಗುತ್ತ) ಭೇಷ್! ಭೇಷ್!! ಬಹಳ ಚಲೋದಾಯಿತು. ಮಂಗಗಳಿಗೆ ಬುದ್ಧಿಯು ಲವಷ್ಟೂ ಇಲ್ಲವೆಂಬುದಕ್ಕೆ ಇದೇ ನಿದರ್ಶನ. ಆ ರಾಮನ ಆಸರೆಯನ್ನು ಸೇರಿ, ಮತ್ತೆ ಮೋಸದಿಂದ ನಿನ್ನ ತಂದೆಯನ್ನು ಕೊಲ್ಲಿಸಿದ, ಸುಗ್ರೀವನಿಗೆ 'ಬಯಸಿ ಬಂದ ಭಾಗ್ಯವು ಅವನ ಕಾಲಬುಡಕ್ಕೇ ಬಂತು. ಹಿಂದಣ ವೈರವನ್ನು ತೀರಿಸುವುದಕ್ಕಾಗಿ, ತಾನಾಗಿ ನಿನ್ನನ್ನು ಕೊಲ್ಲಬಾರದೆಂದು ತಿಳಿದು, ಉಪಾಯಾಂತರದಿಂದ ನಿನ್ನನ್ನು ಕೊಲ್ಲುವುದಕ್ಕಾಗಿ ನಮ್ಮೆಡೆಗೆ ಕಳುಹಿಸಿರುತ್ತಾನೆ. ಒಂದೇ ಕಲ್ಲಿಗೆ ಎರಡು ಹಣ್ಣು ಉದುರಿತು. ಇತ್ತ ನೀನೂ ಸತ್ತುಹೋದಿ, ಅತ್ತ ರಾಜ್ಯವೂ ನಿಷ್ಕಂಟಕವಾಯಿತು. ಭಳಿರೇ, ಮೆಚ್ಚಿದೆ ನಿನ್ನ ಚಿಕ್ಕಪ್ಪನ ಯುಕ್ತಿಗೆ! ಹೇ ಬಾಲಕ, ನೀನು ಚಿಕ್ಕವ, ನಿನಗೆ ಕಪಟವರಿಯದು. ನಿನ್ನ ಚಿಕ್ಕಪ್ಪನು ಉಪಾಯ ಮಾಡಿದರೂ, [redacted] ನಿನ್ನನ್ನು ಕೊಲ್ಲಲಾರೆವು. ನಮ್ಮೆಡೆಗೆ ಸೇರು.

ಅಂಗದ: ಸಾಕು, ನಿಲ್ಲಿಸು! ಮಾಡಬಾರದ ಅನ್ಯಾಯವನ್ನು ಮಾಡಿ, ರಾಮಬಾಣಕ್ಕೆ ತುತ್ತಾಗಿ ಕೈಲಾಸವಾಸಿಯಾದ ನಿನ್ನೊಡನೆಯನಿಗೂ, ರಾಮಬಾಣಕ್ಕಾಹುತಿಯಾಗುವ ಕಾಲವು ಸನ್ನಿಹಿತವಾಗಿದೆಯೆಂದರಿತುಕೊ!

ಪ್ರಹಸ್ತ: ಮರ್ಕಟಾ, ಕೋಪಿಸಲಾಗದು. ಇದ್ದ ವಿಚಾರಗಳನ್ನು ಇದ್ದಂತೆ ಹೇಳಿದಕ್ಕೆ ನಿನಗಿಷ್ಟು ಕೋಪವೇ? ನೀನು ನಮ್ಮ ಪಕ್ಷಕ್ಕೆ ಸೇರಿದರೆ, ನಿನಗೆ ಅನ್ಯಾಯಮಾಡಿದ ರವಿಜನನ್ನು ಕೊಂದು, ನಿನ್ನ ತಂದೆಯ ರಾಜ್ಯವನ್ನು ಹಿಂತಿರುಗಿ ನಿನಗೆ ಕೊಡಿಸುತ್ತೇವೆ, ಸುಖದಿಂದ ಇರಬಹುದು.

ಅಂಗದ: ಮಂತ್ರೀ; ಹರಟೆಯನ್ನು ಸಾಕುಮಾಡು. ರಾವಣನನ್ನು ತೋರಿಸು.

ಪ್ರಹಸ್ತ: ನಿನ್ನ ರಾಮನರಸಿ ಸೀತೆಯನ್ನು ನೋಡಿದವರಾರು?

ಅಂಗದ: ಹಹ್ಹ! ವಾಯುಸುತ ಹನುಮಂತನು ಇಲ್ಲಿ ಬಂದು ಹುಡುಕಿ, ಅವಳ ಇರವನ್ನು ತಿಳಿಸಿರುವನೆಂಬುದು ನಿನಗೂ ಗೊತ್ತು!

ಪ್ರಹಸ್ತ: ಅವನ ಮಾತಿನಲ್ಲಿ ನಂಬುಗೆಯೆ? ಯಾರನ್ನೋ ಕಂಡು ಸೀತೆಯೆಂದು ಭ್ರಮಿಸಿರಬಹುದು ಅಥವಾ ಸುಳ್ಳುಹೇಳಿರಬಹುದು.

ಅಂಗದ: ಲಂಕಾಧಿಪತಿಯ ಸಹೋದರ ವಿಭೀಷಣನು ಹೇಳಿರುವನು. ಇನ್ನ್ಯಾವ ಸಂಶಯ?

ಪ್ರಹಸ್ತ: ಅವನು, ತನ್ನ ಉದರಂಭರಣಕ್ಕಾಗಿ ನಿಮ್ಮಲ್ಲಿ ಸುಳ್ಳು ಹೇಳಿರಬಹುದು. ನಿನ್ನ ಮಾತುಗಳು ಅತಿಯಾದುವು. ನಿನ್ನಂತೆಯೇ

ಉದ್ಧಟತನ ತೋರಿಸಿದ ಮಂಗವೊಂದು ಇಲ್ಲಿಂದ ತನ್ನ ಲಾಂಗೂಲವನ್ನು ಸುಡಿಸಿಕೊಂಡು ಹೋದ ವಿಚಾರ ಅರಿತಿರಬಹುದು. ನಿನಗೂ ಅದೇ ಗತಿಯು ಬಂದೊದಗೀತು. ಎಚ್ಚರಿಕೆ.

ಅಂಗದ: ಲೋ ದಾನವ, ನಿನಗೆ ಗೊತ್ತಿಲ್ಲವೇನಯ್ಯಾ, ಮೊದಲು ಬಂದ ಕಪಿಯು 'ಬಾಲ ಸುಡುಕ'ನು ನೀನೆಂದು ತ್ರಿಭುವನವೇ ಸಾರುತ್ತಿರುವುದು. ಈಗ ನನ್ನ ಬಾಲವನ್ನು ಕಣಕಿನೋಡು.

ಪ್ರಹಸ್ತ: ಎಲಾ ಮರ್ಕಟಾ! ನೀನು ಎಷ್ಟು ಜಾಣತನವನ್ನು ಪ್ರದರ್ಶಿಸಿದೆಯಾದರೂ, ನಿನ್ನನ್ನು 'ಮರ್ಕಟ'ನೆಂದೇ ಹೇಳುವರಲ್ಲದೆ 'ನರ'ನೆಂದು ಯಾರಾದರೂ ಹೇಳುವರೆ? ಆ ರಾಮನು ಹೇಳಿರುವ ಮಾತನ್ನು ಹೇಳಿಬಿಟ್ಟು ಅತ್ತ ಸರಿ.

ಅಂಗದ: ದಾನವಾ! ನೀನು ಎಷ್ಟು ಮಾತನಾಡಿದರೂ ಸೇವಕನಲ್ಲವೇ? ಶ್ರೀರಾಮ ಸಂದೇಶವನ್ನು ಚಾರಕರಲ್ಲಿ ಹೇಳಲಾರೆ.

ಪ್ರಹಸ್ತ: ಕಪಿಯೇ, ಸಾರಿಹೇಳಿದರೂ ನೀನು ಮೊದಲೇ ನನ್ನ ಮಾತು ಕೇಳಲಿಲ್ಲ. ಇನ್ನು ನೀನುಂಟು ಅವನುಂಟು. ಬೇಕಾದಷ್ಟು ಮಾತಾಡು. (ರಾವಣನ ಕಡೆ ತಿರುಗಿ) ಸಭೆಯಲ್ಲಿ ರನ್ನಗದ್ದುಗೆಯಲ್ಲಿ ಮಂಡಿಸಿರುವ ಮೂಲೋಕದ ಗಂಡ, ಗಂಡರಗಂಡನಾದ, ತ್ರಿಭುವನ ವಿಜಯಿಯಾದ ರಾವಣೇಶನನ್ನು ನೋಡು! (ತೋರಿಸುವನು.)

ಅಂಗದ: (ಮುಖ ತಿರುಗಿಸಿ ಕುಳಿತುಕೊಳ್ಳುವನು.)

ಪ್ರಹಸ್ತ: ಅಂಗದ! ಇದೇನು? ಮಾತಿಲ್ಲದೆ ಮೂಕನಂತೆ ಕುಳಿತಿರುವೆ?

ಅಂಗದ: ಅಮಾತ್ಯವರ್ಯ, ಏಕಿಷ್ಟು ಕೋಪ? ನಾನೇನೂ ನಿಮ್ಮೊಡನೆ ಸರಸಲ್ಲಾಪಕ್ಕೆ ಬಂದವನಲ್ಲ. (ರಾವಣನ ಕಡೆ ತಿರುಗಿ) ಎಲೈ ರಾವಣಾಸುರ, ತ್ರಿಲೋಕ ವಿಜಯಿಯೆಂದೆನಿಸಿಕೊಂಡ ನೀನು ಸೀತೆಯನ್ನು ಮೋಸದಿಂದ ಕದ್ದು ತರಬಹುದೇ?

ರಾವಣ: ಎಲೈ ದೂತ, ಲೋಕದಲ್ಲಿರುವ ಉತ್ತಮ ವಸ್ತುಗಳು ರಾಜನಿಗೆ ಸಲ್ಲತಕ್ಕವು. ಆದ್ದರಿಂದ ಲೋಕಕ್ಕೆ ಒಡೆಯನಾದ ನಾನು ಇವಳನ್ನು ತಂದಿರುತ್ತೇನೆ. ಭಯಂಕರಾರಣ್ಯದಲ್ಲಿ ಏಕಾಂಗಿನಿಯಾಗಿದ್ದುದನ್ನು ನೋಡಿ ಮನಕರಗಿ ತಂದಿರುತ್ತೇನೆ. ಅದು ಅಧರ್ಮವೆ?

ಅಂಗದ: ರಾವಣಾ, ಇದೆಂತಹ ಹೊಸ ನೀತಿ! ಪರಸ್ತ್ರೀಯನ್ನು ಅಪಹರಿಸಿ ತರುವುದು ಧರ್ಮವೇ? ರಾಮನು ನಿನ್ನ ನಗರವನ್ನು ಸೇನಾ

ಸಮೇತನಾಗಿ ಮುತ್ತಿರುತ್ತಾನೆ. ಇನ್ನಾದರೂ ವಿವೇಕವನ್ನು ತಂದು ಕೊಂಡು ಸೀತೆಯನ್ನು ಬಿಡು.

ರಾವಣ: ಅಜೇಯರಾದ ನಾವು ಕಪಿಗಳಿಗೆ ಬೆದರಲಾರೆವು.

ಅಂಗದ: ರಾವಣಾ, ನಿನ್ನ ಮತ್ತು ನಿನ್ನ ವಂಶದ ಕುಶಲವನ್ನು ಬಯಸುವುದಾದರೆ ಸೀತೆಯನ್ನು ತಂದೊಪ್ಪಿಸಿ, ಶರಣಾಗತನಾಗು.

ರಾವಣ: (ನಗುತ್ತ) ಏನು? ನಾನು ಈ ಹುಲುಮಾನವರಿಗೆ ಶರಣಾಗತ ನಾಗಬೇಕೆನ್ನುವಿಯಾ? ಮೂರ್ಖ!

ಅಂಗದ: ದಶಕಂಠಾ, ವೃಥಾ ಛಲವನ್ನು ಬಿಡು. ಅವರು ಮಾನವ ರಲ್ಲ; ದೇವಾಂಶಸಂಭೂತರು. ಏಕೆ ನಿಷ್ಠುರವನ್ನು ಕಟ್ಟಿಕೊಳ್ಳುವಿ?

ರಾವಣ: ಏ ದೂತ! ದೇವತೆಗಳೆಲ್ಲಾ ನನ್ನಾಧೀನವಿರುವರು. ಅಷ್ಟೇ ಐಶ್ವರ್ಯ, ವರಬಲಗಳೂ, ಇಂದ್ರಜಿತುವೇ ಮೊದಲಾದ ಪುತ್ರರೂ ಇರುವಂಥ ನನಗೆ ಭಯ ಹುಟ್ಟಿಸುತ್ತಿರುವೆಯಾ?

ಅಂಗದ: ಸಾರ್ವಭೌಮ, ಸುಮ್ಮನೆ ಅವಿವೇಕಿಯಂತೆ ವರ್ತಿಸ ಬೇಡ. ಮಂಡೋದರಿಯು ಬಹಳ ಮಕ್ಕಳನ್ನು ಹೆತ್ತಿರುವಳೆಂದು, ಕಂಡಕಂಡವರ ಕೈಯಿಂದ ವ್ಯರ್ಥವಾಗಿ ಕೊಲ್ಲಿಸಬೇಡ.

ರಾವಣ: ಶಿವನು ದೀರ್ಘಾಯುಷ್ಯ, ಅಜೇಯತ್ವ ಮೊದಲಾದುವು ಗಳನ್ನು ದಯಪಾಲಿಸಿರುವಾಗ, ನಿನ್ನಂತಹ ಮಂಗನ ಒಣ ಬೆದರಿಕೆಗೆ ಜಗ್ಗಬೇಕೆ? ಮುಚ್ಚು ಬಾಯಿ!

ಅಂಗದ: ರಾವಣಾ, ದೇವರು ಕೊಟ್ಟರೂ ಅದನ್ನು ಭೋಗಿಸುವ ಭಾಗ್ಯವನ್ನು ನೀನು ಪಡೆಯಲಿಲ್ಲವೆಂದೇ ತೋರುವುದು. ಕೆಡತಲೆಯು ಹಿಂದೆ ಮೃತ್ಯು ತನ್ನ ಕರಾಳ ಮುಖದಿಂದ ಕೂಡಿ, ತಾಂಡವನೃತ್ಯವನ್ನಾಡು ತ್ತಿರುವಾಗ ಯಾರೇನು ಮಾಡುವರು?

ರಾವಣ: ಎಲೇ ದೂತಾ, ನನ್ನ ಸಮ್ಮುಖದಲ್ಲಿ ನಿಂತು ಹೋರಾಡುವ ದಿಟ್ಟೆದೆಯವನಾರು? ಶೂರ್ಪನಖಿಯ ನಾಸಿಕಛೇದನಮಾಡಿದವರ ಕರು ಳನ್ನು ಬಗಿದು 'ಶಾಕಿನಿ', 'ಡಾಕಿನಿ' ಮೊದಲಾದ ಭೂತಗಣಗಳಿಗೆ ಯಥೇಷ್ಟ ಔತಣಮಾಡಿಸಬೇಕೆಂದೇ ಸೀತೆಯನ್ನು ತಂದಿರುತ್ತೇನೆ.

ಅಂಗದ: ಅಸುರ, ಶೂರ್ಪನಖಿಯ ಮಾತನ್ನು ಕೇಳಿ ನೀನು ಹಾಳಾಗಬೇಡ. ಅವಳು ಮಾಡಬಾರದ ಅನ್ಯಾಯವನ್ನು ಮಾಡಿ ಶಿಕ್ಷೆಗೆ

ಅರ್ಹಳಾದಳು. ರಾಮ-ಲಕ್ಷ್ಮಣರು ಸಾಮಾನ್ಯರಲ್ಲ. ಬಲು ಸಾಹಸಿಗಳಾದ ಖರದೂಷಣರ ಪಾಡೇನಾಯಿತು? ಸರಿಯಾಗಿ ಆಲೋಚಿಸು. ಸೀತೆಯನ್ನು ಶ್ರೀರಾಮನ ಪಾದಕ್ಕೊಪ್ಪಿಸಿ ಶರಣಾಗತನಾಗು!

ರಾವಣ: ಛೀ ಛೀ! ಏನು ಬೊಗಳುತ್ತಿರುವೆ? ಏನಿದು ನಿನ್ನ ಹುಚ್ಚು ಮಾತು! ಕಪಿಯೇ, ಬಂದಂತೇ ತೊಲಗು! ಏನಿದು ನಿನ್ನ ಧಿಟ್ಟತನ!

ಅಂಗದ: ಇದ್ದ ವಿಚಾರವನ್ನು ಇದ್ದ ಹಾಗೇ ಹೇಳಲು ಈ ಅಂಗದನಿಗೆ ಯಾರ ಭಯವೂ ಇಲ್ಲ.

ರಾವಣ: ಎಲೋ ಮಂಗ, ಸಣ್ಣವನೆಂದು ಭಾವಿಸಿ, ಸಹಿಸಿಕೊಂಡಿರುವುದನ್ನು ಕಂಡು ಹರಟುತ್ತಿರುವೆಯಾ? ಮಂದಮತಿ ಕಪಿ! ಈಗ ಸುಮ್ಮಗಾದರೆ ನೆಟ್ಟಗೆ. ಇಲ್ಲವಾದರೆ................

ಅಂಗದ: ಹೇಳಿದ್ದೇ ಮಾತು, ಹಿಡಿದದ್ದೇ ಹಟವಾದರೆ ಯಾರೇನು ಮಾಡುವರು?

ರಾವಣ: (ಕೋಪದಿಂದ) ಯಾರಲ್ಲಿ? ಸಭಾಮರ್ಯಾದೆಯನ್ನು ಮೀರಿ ನಡೆಯುತ್ತಿರುವ ಈ ದೂರ್ತನನ್ನು ಹೊಡೆದಟ್ಟಿಬಿಡಿ.

ಅಂಗದ: ಎಲಾ, ಅವಿವೇಕಿ! ಕೊನೆಗೂ ಯುದ್ಧವೆಂದು ನಿರ್ಣಯಿಸಿದಿಯಾ? ಖಂಡಿತವಾಗಿಯೂ ನಿನ್ನ ತಲೆಯು ಶೀಘ್ರವಾಗಿ ರಾಮಬಾಣಕ್ಕೆ ಈಡಾಗುವುದನ್ನು ನೋಡು. (ಸ್ವಗತ) ಆತ್ಮರಕ್ಷಣೆಗಾಗಿ ಇವರೊಡನೆ ಕಾದಾಡಬೇಕಾಯಿತು. ಇರಲಿ. (ಭಟರ ಪ್ರವೇಶ; ಅಂಗದನನ್ನು ಮುತ್ತುವರು. ಅಂಗದನಿಗೂ ರಾಕ್ಷಸರಿಗೂ ಕಾದಾಟ. (ಪರದೆ.)

ದೃಶ್ಯ ೬.

[ರಾಮನ ಪಾಳೆಯ: ಶ್ರೀರಾಮನು ಕುಳಿತಿರುವನು; ಲಕ್ಷ್ಮಣನು ಅವನ ಪಕ್ಕದಲ್ಲಿ ನಿಂತಿರುವನು. ಉಳಿದ ಕಪಿನಾಯಕರು ಅಲ್ಲಲ್ಲಿ ನಿಂತಿರುವರು. ತೆರೆಯಲ್ಲಿ ಕೋಲಾಹಲವು ಕೇಳಬರುವುದು.]

ರಾಮ: (ಆಲಿಸಿ) ಸುಗ್ರೀವ, ಅಂಗದನಿನ್ನೂ ಬರಲಿಲ್ಲವೇಕೆ? ಅಪಾಯಕ್ಕೊಳಗಾಗಿರಬಹುದೇ?

ಸುಗ್ರೀವ: ಪ್ರಭೋ, ರಾವಣನ ಕಡೆಯವರಿಗೂ, ಅಂಗದನಿಗೂ ಕೈಕೈ ಹತ್ತಿರಬಹುದು ಎಂಬ ಸಂದೇಹ. ಏಕೆಂದರೆ, ಕೋಟೆಯೊಳಗಿಂದ ಗಜ, ಹಯಗಳ ಶರೀರವು ಒಂದೇ ಸಮನೆ ಕೋಟೆಯ ಕಂದಕಕ್ಕೆ ಬೀಳುತ್ತಿರುವುದು ಕಾಣಿಸುತ್ತಿದೆ.

ರಾಮ: ಸಖಿಶ್ರೇಷ್ಠ, ದೂತನಾಗಿ ಹೋದವನೊಡನೆಯೂ ಸಂಗರವೇ? (ಚಿಂತೆಯಿಂದ) ಅಯ್ಯೋ! ಬಾಲಕನಾದ ಅಂಗದನು ಅಸಂಖ್ಯಾತ ಬಲಿಷ್ಠ ರಾಕ್ಷಸರೊಡನೆ ಬವರವನ್ನು ಕೊಟ್ಟು ಹೇಗೆ ಪಾರಾಗಿ ಬರುವನೋ? ತಂದೆಯಿಲ್ಲದ ತಬ್ಬಲಿ ಮಗು. ಸುಗ್ರೀವಾ, ಆತನ ಸಹಾಯಕ್ಕಾಗಿ ವೀರಾಗ್ರಣಿಯಾದ ವಾತಸಂಭವ ಹನುಮಂತನನ್ನು ಕಳುಹಿಸೋಣ. ಭಕ್ತಾಗ್ರಣಿ ಹನುಮಂತಾ! (ಹನುಮಂತನ ಪ್ರವೇಶ.)

ಹನುಮಂತ: ಪ್ರಭೋ, ಏನಪ್ಪಣೆ?

ರಾಮ: ಹನುಮಂತಾ, ಕುಮಾರ ಅಂಗದನನ್ನು ಸಂಧಾನಕ್ಕಾಗಿ ವೈರಿಸಮೂಹಕ್ಕೆ ಕಳುಹಿಸಿರುತ್ತೇವೆ. ಅವನಿನ್ನೂ ಮರಳಿಬಂದಿಲ್ಲ. ಸುರಕ್ಷಿತವಾಗಿ ಅಂಗದನನ್ನು ಕರೆದುಕೊಂಡು ಬರಬೇಕಾಗಿದೆ.

ಹನುಮಂತ: ಪ್ರಭೊ, ಆಜ್ಞೆಯನ್ನು ಶಿರಸಾವಹಿಸಿದ್ದೇನೆ. (ಥರದೆ)

ದೃಶ್ಯ ೭.

[ರಾವಣನ ಆಸ್ಥಾನ—ಆಸ್ಥಾನವು ರಣರಂಗವಾಗಿದೆ. ವೈಭವವು ಸೂರೆಯಾಗಿದೆ. ಕಡಿದುಬಿದ್ದ ತಲೆಗಳು, ಕೈಕಾಲುಗಳು, ಗಜ ಹಯಗಳ ಹೆಣ, ಸೈನಿಕರ ಚಿತ್ಕಾರ, ನೆತ್ತರ ಓಕುಳಿ, ಅಂಗದನು ಕೈಯಲ್ಲಿರುವ ಗಿರಿ-ಮರಗಳಿಂದ ಸೈನಿಕರನ್ನು ಸದೆಬಡಿಯುತ್ತಿರುವನು. ರಾವಣನು ಆಸನದಲ್ಲಿ ಮಂಡಿಸಿರುವನು. ಪ್ರಹಸ್ತನು ಬದಿಯಲ್ಲಿ ಕುಳಿತಿರುವನು. ಸಾಮಂತರು, ಪ್ರಜೆಗಳು, ಮಕ್ಕಳು—ಎಲ್ಲರೂ ಅವರವರ ಸ್ಥಾನಗಳಲ್ಲಿ ಮಂಡಿಸಿರುವರು. ಹನುಮಂತನು ಶೀಘ್ರದಿಂದ ಪ್ರವೇಶಿಸುವನು. ಆಸ್ಥಾನವನ್ನು ಅರೆಕ್ಷಣ ದಿಟ್ಟಿಸಿ,)

ಹನುಮಂತ: (ಸ್ವಗತ) ಶ್ರೀರಾಮನಾಜ್ಞೆಯಂತೆ ಪವನವೇಗದಂತೆ ಬಂದು ನೋಡುವಾಗ ವೀರಾವೇಶದಿಂದ ಕುಮಾರ ಅಂಗದನು ಕೈಯಲ್ಲಿರುವ ಗಿರಿಮರಗಳಿಂದ ರಾಕ್ಷಸರನ್ನು ನಿರ್ಮೂಲವಮಾಡುತ್ತಿರುವನು, ಎಂತಹ ಅನರ್ಥ! ಇರಲಿ (ಪ್ರಕಾಶ) ಕುಮಾರ ಅಂಗದಾ, ತಡೆ, ತಡೆ; ನೀನು ಬಂದಿರುವ ಕೆಲಸವೇನು? ನೀನು ಇಲ್ಲಿ ಮಾಡುತ್ತಿರುವ ಕೆಲಸವೇನು?

ಅಂಗದ: ಹನುಮಂತ, ಆತ್ಮರಕ್ಷಣೆಗಾಗಿ ಕಾದಾಡಬೇಕಾಯಿತು.

ಹನುಮಂತ: ಅಂಗದ, ರಾಮನು ಸೀತೆಯನ್ನು ಹೇಳಿಬಾ ಎಂದು ಕಳುಹಿಸಿದರೆ ಹಿಂದುಮುಂದಿನಾಲೋಚನೆಯಿಲ್ಲದೆ ಹೋರಾಡುವುದೇ? ನಿನ್ನ ಈ ವರ್ತನೆಯನ್ನು ಕೇಳಿದಾಗ ಶ್ರೀರಾಮನು ಕೋಪಿಸದಿರಲಾರನು.

ಅಂಗದ: ಹನುಮಂತಾ, ಇವರಾಗಿಯೆ ದೂತನಾದ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ.

ಹನುಮಂತ: ಬಾಲಕಾ, ಆದುದು ಆಯಿತು. ನಿನ್ನ ಸಾಹಸವನ್ನು ಮುಂದೆ ತೋರಿಸ ಬಯುಂತೆ. ಈಗ ತೆರಳೋಣ.

ಅಂಗದ: ಹನುಮಂತಾ, ಈ ಅಧಮನ ಅಂತ್ಯ ನಿರ್ಣಯವನ್ನು ಕೇಳಿಕೊಂಡು, ಶ್ರೀರಾಮನಲ್ಲಿಗೆ ತೆರಳೋಣ, ಆಗದೇ?

ಹನುಮಂತ: ಕುಮಾರ, ನಿನ್ನ ಮಾತಿಗೊಪ್ಪಿದೆ; (ರಾವಣನ ಕಡೆಗೆ ತಿರುಗಿ) ಎಲೈ ರಾವಣಾಸುರಾ, ದೂತನ ಮೇಲೆ ಕೈಮಾಡುವುದು ರಾಜನೀತಿಯಲ್ಲ ಈಗ ನಿನ್ನ ಮನದಭಿಪ್ರಾಯವನ್ನು ತಿಳಿಸು.

ರಾವಣ: ಎಲೋ, ಮಂಗಗಳೇ, ನನ್ನ ಅಭಿಪ್ರಾಯವನ್ನು ಕೇಳಿ. ಭುವನವು ಕೆಳಕ್ಕೆ ಸರಿದು ಪಾತಾಳವು ಭೂಮಿಯ ಸ್ಥಾನಕ್ಕೆ ಬಂದರೂ, ನಾನು ಸೀತೆಯನ್ನು ಮರಳಿ ತಂದೊಪ್ಪಿಸಲಾರೆ.

ಹನುಮಂತ: ದಶಶಿರನೇ, ಸೀತೆಯನ್ನು ತಂದೊಪ್ಪಿಸು. ವ್ಯರ್ಥವಾಗಿ ದಾಶರಥಿಯ ಕೂರಲಗಿಗೆ ಈಡಾಗಬೇಡ. ಶ್ರೀರಾಮನು ಮನುಷ್ಯನಲ್ಲ. ಯುದ್ಧಕ್ಕೆಳೆದು ನಿನ್ನವರೆಲ್ಲರ ನಾಶಕ್ಕೆ ಕಾರಣನಾಗಬೇಡ. ಉತ್ತಮ ಬ್ರಾಹ್ಮಣವಂಶದವನಾದ ನಿನಗೆ ಇದು ಯೋಗ್ಯವಲ್ಲ. ಶರಣಾಗತನಾಗುವಿಯೊ? ಕೊಡುವಿಯೊ ಬವರವನ್ನು?

ರಾವಣ: ಮೂರ್ಖ ಕಪಿ? ಬಾಯಿಗೆ ಬಂದಂತೆ ಬೊಗಳುವಿ! ನಿನ್ನನ್ನು ಕರೆಸಿಡವನಾರು? ಧರ್ಮಶ್ರವಣಕ್ಕೆ ನಿನ್ನಲ್ಲಿ ಹೇಳಿದವರಾರು? ಬಾಯ್ಮುಚ್ಚು. ನನ್ನ ನಿರ್ಣಯವನ್ನು ಕೇಳು. ರಾತ್ರಿಯಲ್ಲಿ ಉದಯವಾಗುತ್ತಿರುವ ಸುಧಾಂಶುವು ದಾರಿತಪ್ಪಿ, ಹಗಲು ಉದಯಿಸಿದರೂ, ಹಗಲಲ್ಲಿ ಉದಯಿಸುವ ಅರ್ಕನು ರಾತ್ರಿಯಲ್ಲಿ ಉದಯಿಸಿದರೂ, ಸಪ್ತಸಾಗರಗಳೇ ಬತ್ತಿ ಹೋದರೂ, ಹಾಲಾಹಲ ವಿಷವೇ ಬಂದು ಭಯಗೊಳಿಸಿದರೂ 'ಶರಣು' ಎಂದು ಹೇಳಲಾರೆನು. ಬರಲಿ ರಾಮನ ದಂಡು!

ಹನುಮಂತ: (ಅಂಗದನ ಕಡೆಗೆ ತಿರುಗಿ) ಅಂಗದಾ, ಕೇಳಿದಿಯಲ್ಲವೇ ಇವನ ನಿರ್ಧಾರವನ್ನು! ರಾವಣನು ತನ್ನ ಅಂತ್ಯಕಾಲವನ್ನೇ ಬಯಸಿದವನು. ಇನ್ನು ಕಾರ್ಯೋನ್ಮುಖರಾಗೋಣ.

ಅಂಗದ: ರಾವಣಾ, ನಿನ್ನ ಭೇಟಿಗೆ ಬಹುಬೇಗನೇ ಬರುತ್ತೇವೆ.........

(ತೆರಳುವರು.)

ರಾವಣ: ಹುಂ! ನಡೆಯೋ ಕಪಿ! ಹುಲು ಕಪಿಗಳಿಂದಾಗುವ ಹಾನಿಯನ್ನು ನಾನು ನೋಡಿಕೊಳ್ಳುತ್ತೇನೆ. (ಪರದೆ ಬೀಳುವುದು.)

ದೃಶ್ಯ ೮

[ಶ್ರೀರಾಮನ ಶಿಬಿರ—ಶ್ರೀರಾಮನು ಚಿಂತೆಯಿಂದಿರುವನು. ಹನುಮಂತ ಅಂಗದರ ಪ್ರವೇಶ.]

ಹನು–ಅಂಗದ: (ಪ್ರವೇಶಿಸಿ) ಸ್ವಾಮಿನ್! ಚರಣಸೇವಕರು ವಂದಿಸುತ್ತೇವೆ.

ಶ್ರೀರಾಮ: ಎದ್ದೇಳಿ. ನಿರ್ವಿಘ್ನವಾಗಿ ಹಿಂದಿರುಗಿದಿರಷ್ಟೇ? ನೀವುಗಳು ಹೋದ ಕಾರ್ಯವೇನಾಯಿತು?

ಅಂಗದ: ರಾಮಚಂದ್ರ, ನಿನ್ನ ಸಂದೇಶವನ್ನು ಆ ನೀಚನಿಗೆ ತಿಳಿಸಿದಾಗ, ಅದಕ್ಕೆ ಸಮ್ಮತಿಸದೆ ಯುದ್ಧಕ್ಕೆ ಅನುಮತಿಯನ್ನು ಇತ್ತಿರುವನು. ಲಂಕೆಯ ಲಗ್ಗೆಗೆ ಅಪ್ಪಣೆ ದಯಪಾಲಿಸಿರಿ.

ಹನುಮಂತ: ಮುಂದಿನ ಕಾರ್ಯಾಚರಣೆಯೇನು ಪ್ರಭೋ?

ಶ್ರೀರಾಮ: ಸುಗ್ರೀವಾ, ಹಿತಕರವಾದ ನಮ್ಮ ಮಾತು ರಾವಣನಿಗೆ ಕರ್ಣಕರ್ಕಶವಾಯಿತು. ವ್ಯರ್ಥವಾಗಿ ಅಂಗದನನ್ನು ಬಳಲಿಸಿದೆವು. ನಮ್ಮ ಉಪದೇಶವನ್ನು ಕೇಳಲು ಅವನ ಮನ ಒಪ್ಪಲಿಲ್ಲ. ಆಹವಕ್ಕೆ ಮನವಿತ್ತಿರುವನು. ಸಮಗ್ರ ರಾಕ್ಷಸ ವಂಶನಿರ್ಮೂಲನಕ್ಕೆ ರಾವಣನೇ ಮೂಲ ಕಾರಣನು. ಇರಲಿ. ಸುಗ್ರೀವಾ, ನಾಳೆಯೇ ಲಂಕೆಯ ಮುತ್ತಿಗೆಗೆ ಅನುಮತಿಯನ್ನೀಯು.

ಸುಗ್ರೀವ: ಸ್ವಾಮೀ, ತಮ್ಮಾಜ್ಞೆಯಂತೆ ನಾಳೆ ಪ್ರಾತಃಕಾಲದಲ್ಲಿ ಲಂಕಾದುರ್ಗನಾಶಕ್ಕೆ ಅನುಮತಿಯನ್ನು ಈಯುತ್ತೇನೆ. ಈಗ ವಿರಮಿಸೋಣ!

ಕಪಿಸೇನೆ: (ತೆರಮರೆಯಲ್ಲಿ) ರಘುಕುಲಸಾರ್ವಭೌಮ ಶ್ರೀರಾಮಚಂದ್ರನಿಗೆ ಜಯವಾಗಲಿ! ಜಯ ಜಯ ಶ್ರೀರಾಮ! (ಪರದೆ ಬೀಳುವುದು.)

॥ ಸಿರಿಗನ್ನಡಂ ಗೆಲ್ಗೆ ॥

Edited, Printed & Published by K. V. Shenoy
at The Prabhat Printers, Ltd., Mangalore.